ಸಾಕ್ಷಿಯನ್ನು ದಿನಾಂಕ 16-02-2023 ರಂದು ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ ಎಸ್ ಬಿ ವಕೀಲರಿಂದಃ**

ನಿಡಿ.1 ನ್ನು ನಾನು ಹಾಜರ ಮಾಡಿಲ್ಲ ಎಂದರೆ ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಅದನ್ನು ಬರೆದಿಲ್ಲ ಎಂದು ನುಡಿಯುತ್ತೇನೆ. ಸದರಿ ದಾಖಲೆಯನ್ನು ಇಪಿ.ನಂ.166/1989 ರಲ್ಲಿ ಹಾಜರಪಡಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ.1 ರ ಕುರಿತು ನನ್ನ ಕೈಫಿಯತ್‌ನಲ್ಲಿ ಬರೆಯಲಾಗಿದೆಯೇ ಎಂದು ಕೇಳಿದರೆ 1997 ರಲ್ಲಿ ರಾಜೀ ಪತ್ರ ಆಗಿತ್ತು ಎಂದು ಬರೆಸಿರುವುದು ಎಂದು ನುಡಿಯುತ್ತೇನೆ. ನಿಡಿ.1 ರ ಬಗ್ಗೆ ನಾನು ಬರೆಸಿಲ್ಲ ಎಂದು ಪುನಃ ಸೂಚಿಸಿದರೆ ನಿಜ ಎಂದು ನುಡಿಯುತ್ತೇನೆ. ನಿಡಿ.1 ರ ಅಸಲು ಕಾಗದ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾವು ಬರೆಸಿರುವ 1997 ರ ರಾಜೀ ಕಾಗದದ ಬಗ್ಗೆ ಗೊತ್ತು ಹಾಗೂ ನಿಡಿ.1 ರ ಬಗ್ಗೆ ಐಡಿಯಾ ಇಲ್ಲ ಎಂದು ನುಡಿಯುತ್ತೇನೆ. ನಾನು ಹೇಳುವ 1997 ರ ರಾಜೀ ಕಾಗದಕ್ಕೆ ನಾನು ಪಕ್ಷಗಾರನಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ಸೋದರ ಮಾವ ಅದನ್ನು ಮಾಡಿದ್ದರು. ಯಾವ ತಾರೀಕಿಗೆ ಅದು ಆಯಿತು ಎಂದು ನನ್ನ ಕೈಫಿಯತ್ತಿನಲ್ಲಿ ನಮೂದಿಸಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ದಾಖಲೆ ಹಾಜರಪಡಿಸಿದ್ದೇನೆ. 1997 ರಲ್ಲಿ ರಾಜೀ ಪತ್ರ ಆಯಿತು ಎಂದು ತೋರಿಸುವ ದಾಖಲೆ ಹಾಜರಪಡಿಸಿಲ್ಲ ಎಂದರೆ ರಾಜೀಯಾದ ಮೇರೆಗೆ ನ್ಯಾಯಾಲಯದ ಹೊರಗಡೆ ರಾಜೀ ಪತ್ರ ಮಾಡಿದ್ದು ಹಾಗೂ ದುಡ್ಡು ಕೊಟ್ಟಿದ್ದು ಹಾಗೂ ನಂತರ ಕೇಸನ್ನು ವಾಪಸ ಪಡೆದುಕೊಂಡಿದ್ದು ಎಂದು ನುಡಿಯುತ್ತೇನೆ. ಸದರಿ ರಾಜೀ ಪತ್ರವನ್ನು ಆ ರೀತಿ ಹಿಂಪಡೆದ ದಾವೆಯಲ್ಲಿ ನ್ಯಾಯಾಲಯದ ಗಮನಕ್ಕೆ ತರಲಾಗಿತ್ತು ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಎಕ್ಸಿಕ್ಯೂಶನ್ ಕೇಸಿನಲ್ಲಿ ಹಾಜರಪಡಿಸಲಾಯಿತು ಎಂದು ನುಡಿಯುತ್ತೇನೆ. ಸದರಿ ಎಕ್ಸಿಕ್ಯೂಶನ್ ಕೇಸಿನ ನಂಬರ ನನಗೆ ಗೊತ್ತಿಲ್ಲ ಎಂದರೆ ನಿಜ. ನಾನು ನನ್ನ ಪರವಾಗಿ ಇರುವ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ತಿಳಿದುಕೊಂಡು ಸಾಕ್ಷಿ ಹೇಳಲು ಬಂದಿರುವುದೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಃ ನುಡಿಯುತ್ತಾರೆ 70 ವರ್ಷದ ಕೇಸ್ ಇರುವುರಿದಂದ ಎಲ್ಲವನ್ನು ನೆನಪಿನಲ್ಲಿಟ್ಟುಕೊಳ್ಳಲು ಆಗುವುದಿಲ್ಲ. ನಿಡಿ.1 ನ್ನು ಅಸಲು ದಾವಾ

ನಂ.273/2003 ರಲ್ಲಿ ಮೊಟ್ಟಮೊದಲ ಬಾರಿಗ ಹಾಜರಪಡಿಸಿದ್ದು ಎಂದರೆ ನಿಜ. ಸದರಿ ಕೇಸಿನಲ್ಲಿ ಮಲ್ಲಿಕಾರ್ಜುನ ಅಥವಾ ಅವರ ಸಹೋದರಿಯರು ಅಥವಾ ಅವರ ಮಕ್ಕಳು ಪಕ್ಷಗಾರರಾಗಿರಲಿಲ್ಲ ಎಂದರೆ ನಿಜ.

**ಮುಂದುವರೆದ ಪಾಟಿ ಸವಾಲಿಗೆ** ಕಾಲಾವಕಾಶ **ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.